# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 701 |
| ಉತ್ತರಿಸಬೇಕಾದ ದಿನಾಂಕ | : | 12.07.2023 |
| ಸದಸ್ಯರ ಹೆಸರು | : | ಶ್ರೀ. ಕೆ ಪ್ರತಾಪ್ ಸಿಂಹ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಭೂಮಿ 7.0 ತಂತ್ರಾಂಶದಲ್ಲಿ ಚಾಲ್ತಿಯಲ್ಲಿದ್ದ ಪೋಡಿ ಇಂಡೀಕರಣ ವ್ಯವಸ್ಥೆ ಇದ್ದಕ್ಕಿದ್ದಂತೆ ಸ್ಥಗಿತ ಗೊಂಡಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಂದಾಯ ಇಲಾಖೆಯಲ್ಲಿ ಜಮೀನುಗಳ ಪೋಡಿ ಇಂಡೀಕರಣ ಮಾಡಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಕುರಿತು ಅನುಸರಿಸಬೇಕಾದ ಕ್ರಮಗಳ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. (ಲಗತ್ತಿಸಿದೆ) |
| ಆ | ಬಂದಿದ್ದಲ್ಲಿ, ಭೂಮಿ 7.0 ತಂತ್ರಾಂಶದಲ್ಲಿ ಚಾಲ್ತಿಯಲ್ಲಿದ್ದ ಪೋಡಿ ಇಂಡೀಕರಣ ವ್ಯವಸ್ಥೆ ಇದ್ದಕ್ಕಿದ್ದಂತೆ ಸ್ಥಗಿತಗೊಳ್ಳಲು ಕಾರಣಗಳೇನು; | |
| ಇ | ಭೂಮಿ 7.0 ತಂತ್ರಾಂಶದಲ್ಲಿ ಚಾಲ್ತಿ ಯಲ್ಲಿದ್ದ ಪೋಡಿ ಇಂಡೀಕರಣ ವ್ಯವಸ್ಥೆ ಇದ್ದಕ್ಕಿದ್ದಂತೆ ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಹೋಗಲಾಡಿಸಲು ಇದುವರೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | |
| ಈ | ಯಾವ ಕಾಲಮಿತಿಯೊಳಗೆ ಈ ಸಮಸ್ಯೆಯನ್ನು ಪರಿಹರಿಸಲಾಗುವುದು? | |

ಕಂಇ 183 ಎಂಆರ್‌ಆರ್ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಭೂಮಿ ಉಸ್ತುವಾರಿ ಕೋಶ, 1ನೇ ಮಹಡಿ, ಎಸ್. ಎಸ್.ಎಲ್.ಆರ್. ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು 560001.

Email: bhoomi.bmc01@gmail.com Phone: 080-22113255

ಸಂಖ್ಯೆ: BMC-12015/215/2023 E 1112486 ದಿನಾಂಕ:28-06-2023

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.

ಮಾನ್ಯರೆ,

ವಿಷಯ: ಸರ್ಕಾರಿ ಜಮೀನಿನಲ್ಲಿ ಮಂಜೂರಾದ ಜಮೀನುಗಳ ಪೋಡಿ ಇಂದೀಕರಣ ಮಾಡಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಿರುವ ಕುರಿತು.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಜಮೀನಿನಲ್ಲಿ ಮಂಜೂರಾದ ಜಮೀನುಗಳ ಪೋಡಿ ಇಂದೀಕರಣ ಮಾಡಲು ಭೂಮಿ ತಂತ್ರಾಂಶದಲ್ಲಿ ಅವಕಾಶ ಕೋರಿ ಹಲವಾರು ಪತ್ರಗಳು ಸ್ವೀಕೃತವಾಗುತ್ತಿವೆ. ಈ ಹಿನ್ನಲೆಯಲ್ಲಿ, ಸರ್ಕಾರಿ ಜಮೀನಿನಲ್ಲಿ ಮಂಜೂರಾದ ಜಮೀನುಗಳ ಪೋಡಿ ಇಂದೀಕರಣ ಮಾಡಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ನಾಗರೀಕರು ಅಥವಾ ಭೂಮಿ ಆಪರೇಟರನು ಕೆಳಕಂಡ ಲಿಂಕ್ ನ್ನು ಬಳಸಿ ಅರ್ಜಿಯನ್ನು ದಾಖಲಿಸಬಹುದು.

https://landrecords.karnataka.gov.in/Service145/

**ಕಾರ್ಯ ವಿಧಾನ:**

1. ಅರ್ಜಿದಾರನು ತನ್ನ ಮೊಬೈಲ್ ನಂಬರ್ ದಾಖಲಿಸಿ ಒಟಿಪಿ ಮೂಲಕ ಲಾಗಿನ್ ಆಗಬೇಕು.
2. ತಂತ್ರಾಂಶದಲ್ಲಿ ಲಾಗಿನ್ ಆಧ ನಂತರ ಅರ್ಜಿದಾರನು ತನ್ನ ಆಧಾರ್ ekyc ಯನ್ನು ನೀಡಬೇಕು.
3. ನಂತರ ಮೂಲ ಸರ್ವೇ ನಂಬರ್ ನ್ನು ಭೂಮಿಯಿಂದ ಆಯ್ಕೆ ಮಾಡಬೇಕು.
4. ಪೋಡಿ ಪ್ರಕ್ರಿಯೆಗೆ ಒಳಪಡುವ ಹಕ್ಕುದಾರನನ್ನು ಆಯ್ಕೆ ಮಾಡಬೇಕು, ಈ ಹಂತದಲ್ಲಿ ಆಧಾರ್ ನಲ್ಲಿರುವ ಹೆಸರು ಹಾಗೂ ಪಹಣಿಯಲ್ಲಿರುವ ಹೆಸರು ಹೊಂದಾಣಿಕೆಯಾಗಬೇಕು.
5. ನಂತರ ಹೊಸ ಸರ್ವೇ ನಂಬರ್ ನ್ನು ದಾಖಲಿಸಬೇಕು.
6. ಡಿಡಿಎಲ್ ಆರ್ ಆದೇಶ ಸಂಖ್ಯೆ ಮತ್ತು ದಿನಾಂಕ ದಾಖಲಿಸಬೇಕು.
7. ಹೊಸ ಸರ್ವೇ ನಂಬರ್ ಗೆ ಸಂಬಂಧಿಸಿದ ಟಿಪ್ಪಣಿ ಹಾಗೂ ಪಕ್ಕಾ ಪ್ರತಿಯನ್ನು ಅಪ್ಲೋಡ್ ಮಾಡಬೇಕು.
8. ದಿನಾಂಕ 1/1/2018 ರೊಳಗೆ ಡಿಡಿಎಲ್ಆರ್ ಹೊರಡಿಸಿರುವ ಆದೇಶಗಳಿಗೆ ಕಡ್ಡಾಯವಾಗಿ ಹೊಸ ಸರ್ವೇ ನಂಬರ್ ವಿವರ ಆಕಾರಬಂದ್ ಡೇಟಾ ಬೇಸ್ ನಲ್ಲಿ ಲಭ್ಯವಿರಬೇಕು.
9. ನಂತರ ಅರ್ಜಿಯನ್ನು ಉಳಿಸಿ ಮುಂದಿನ ಹಂತಕ್ಕೆ ಸಲ್ಲಿಸಬೇಕು.
10. ನಂತರ ಅರ್ಜಿಯು ಮೋಜಿಣಿ ತಂತ್ರಾಂಶದಲ್ಲಿ ತಾಲ್ಲೂಕು ಆಪರೇಟರ್ ಲಾಗಿನ್ ನಲ್ಲಿ ಲಭ್ಯವಿರುವುದು.
11. ತಾಲ್ಲೂಕು ಆಪರೇಟರ್ ಅನುಮೋದನೆ ನಂತರ ಸೂಪರ್ ವೈಸರ್ ಲಾಗಿನ್ ನಲ್ಲಿ ಲಭ್ಯವಿರುವುದು.

12. ಸೂಪರ್ ವೈಸರ್ ಅನುಮೋದನೆ ನಂತರ ಎಡಿಎಲ್‌ಆರ್ ಲಾಗಿನ್ ನಲ್ಲಿ ಲಭ್ಯವಿರುವುದು.
13. ಎಡಿಎಲ್‌ಆರ್ ಅನುಮೋದನೆ ನಂತರ ಡಿ ಡಿ ಎಲ್ ಆರ್ ಲಾಗಿನ್ ನಲ್ಲಿ ಲಭ್ಯವಿರುವುದು.
14. ಡಿಡಿಎಲ್‌ಆರ್ ಅನುಮೋದನೆ ನಂತರ ಅರ್ಜಿಯು ಪಹಣಿ ಇಂಡೀಕರಣಕ್ಕಾಗಿ ಭೂಮಿಗೆ ರವಾನೆಯಾಗುವುದು

ಆದುದರಿಂದ ಸರ್ಕಾರಿ ಜಮೀನಿನಲ್ಲಿ ಮಂಜೂರಾದ ಜಮೀನುಗಳಿಗೆ ಸಂಬಂಧಿಸಿದಂತೆ, ನಿಯಮಾನುಸಾರ ದಾಖಲೆಗಳನ್ನು ಪರಿಶೀಲಿಸಿಕೊಂಡು, ಸದರಿ ಕಾರ್ಯವಿಧಾನ ಅನುಸರಿಸಿ ಕಾನೂನುರೀತ್ಯಾ ಪೋಡಿ ಇಂಡೀಕರಣ ಮಾಡುವಂತೆ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಡಿಡಿಎಲ್‌ಆರ್, ಎಡಿಎಲ್‌ಆರ್, ಉಪವಿಭಾಗಾಧಿಕಾರಿಗಳು ಮತ್ತು ತಾಲ್ಲೂಕು ತಹಶೀಲ್ದಾರರಿಗೆ ಸೂಚಿಸುವಂತೆ ಹಾಗೂ ಸದರಿ ತಂತ್ರಾಂಶದಲ್ಲಿ ಸಾರ್ವಜನಿಕರು ಅರ್ಜಿ ಸಲ್ಲಿಸಲು ಅವಕಾಶವಿರುವ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,

ಆಯುಕ್ತರು.
ಭೂಮಾಪನ ಇಲಾಖೆ ಹಾಗೂ
ಪದನಿಮಿತ್ತ ನಿರ್ದೇಶಕರು
ಭೂಮಿ & ಯುಪಿಓಆರ್, ಬೆಂಗಳೂರು.

ಪ್ರತಿಯನ್ನು:

1. ಪ್ರಾದೇಶಿಕ ಆಯುಕ್ತರು ಬೆಂಗಳೂರು/ಮೈಸೂರು/ಬೆಳಗಾವಿ ಮತ್ತು ಕಲ್ಬುರ್ಗಿ ವಿಭಾಗರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ಭೂದಾಖಲೆಗಳ ಉಪನಿರ್ದೇಶಕರು ಮತ್ತು ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ (ಜಿಲ್ಲಾಧಿಕಾರಿಗಳ ಮೂಲಕ).
3. ರಾಜ್ಯದ ಎಲ್ಲಾ ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ (ಜಿಲ್ಲಾಧಿಕಾರಿಗಳ ಮೂಲಕ).
4. ರಾಜ್ಯದ ಎಲ್ಲಾ ಜಿಲ್ಲಾ ಭೂಮಿ ಸಮಾಲೋಚಕರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.